# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ಸಂಖ್ಯೆ: ಕವಿಪ್ರನಿನಿ/ಜಿರಿಎ/ಜಿ15/86149/18-19

ನಿಗಮ ಕಾರ್ಯಾಲಯ
ಕಾವೇರಿ ಭವನ
ಬೆಂಗಳೂರು-560009

ದಿನಾಂಕ: 03 OCT 2018

## ಅಧಿಕೃತ ಜ್ಞಾಪನ

**ವಿಷಯ:** ಕರ್ನಾಟಕದ ಮಾನ್ಯ ಉಚ್ಛ ನ್ಯಾಯಾಲಯದ ಧಾರವಾಡ ಮತ್ತು ಕಲಬುರಗಿ ಪೀಠಗಳಲ್ಲಿನ ನಿಗಮದ ಪ್ರಕರಣಗಳಲ್ಲಿ ವಕೀಲರಿಗೆ ಸಹಕರಿಸಲು 'ನೋಡಲ್ ಅಧಿಕಾರಿ' ಗಳನ್ನು ನೇಮಿಸಿದ ಬಗ್ಗೆ.

---

ಧಾರವಾಡ ಮತ್ತು ಕಲಬುರಗಿಯಲ್ಲಿ ಕರ್ನಾಟಕ ಮಾನ್ಯ ಉಚ್ಛ ನ್ಯಾಯಾಲಯದ ಪೀಠಗಳು ಆರಂಭಗೊಂಡ ನಂತರ, ಹುಬ್ಬಳ್ಳಿ, ಬಾಗಲಕೋಟೆ ಮತ್ತು ಕಲಬುರಗಿ ವ್ಯಾಪ್ತಿಯ ತಾಂತ್ರಿಕ, ಭೂ ಸ್ವಾಧೀನ, ವಿವಿಧ ರೀತಿಯ ಪರಿಹಾರಗಳ ವಿಷಯಗಳು ಹಾಗೂ ಸೇವಾ ವಿಷಯಗಳಾದ ವರ್ಗಾವಣೆ, ಪದೋನ್ನತಿ, ನೇಮಕಾತಿ, ವೇತನ ನಿಗದಿಪಡಿಸುವಿಕೆ ಮತ್ತಿತರ ವಿಷಯಗಳಲ್ಲಿ ಕವಿಪ್ರನಿನಿಯ ವಿರುದ್ಧ ಧಾರವಾಡ ಮತ್ತು ಕಲಬುರಗಿ ಪೀಠಗಳಲ್ಲಿ ಹಲವು ಪ್ರಕರಣಗಳ ಅರ್ಜಿಗಳು ದಾಖಲಾಗಿರುತ್ತವೆ. ಸದರಿ ಪ್ರಕರಣಗಳಿಗೆ ಸಂಬಂಧಿಸಿದ ರಿಟ್ ಅರ್ಜಿಗಳನ್ನು ಮತ್ತು ನೋಟೀಸ್‌ಗಳನ್ನು ಕವಿಪ್ರನಿನಿಯ ಕಾನೂನು ಶಾಖೆಯು ಮಾನ್ಯ ನ್ಯಾಯಾಲಯದಿಂದ ಸ್ವೀಕರಿಸುತ್ತಿದ್ದಂತೆಯೇ, ಮಾನ್ಯ ನ್ಯಾಯಾಲಯದಲ್ಲಿ ಪ್ರಕರಣಗಳನ್ನು ನಡೆಸಲು ಧಾರವಾಡದ ಮತ್ತು ಕಲಬುರಗಿಯ ನಿಗಮದ ವಕೀಲರಿಗೆ ಪ್ರಕರಣಗಳನ್ನು ವಹಿಸಲಾಗುತ್ತಿದೆ. ನಂತರ, ಸದರಿ ಪ್ರಕರಣಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ಮತ್ತು ದಾಖಲೆಗಳನ್ನು ಸಂಬಂಧಿಸಿದ ಕಛೇರಿಗಳಿಂದ ಪಡೆದು ನಿಗಮದ ವಕೀಲರಿಗೆ ಕಳುಹಿಸಿ ಆಕ್ಷೇಪಣೆಗಳನ್ನು ಸಿದ್ಧಪಡಿಸಲು ಸೂಚಿಸಲಾಗುತ್ತಿದೆ. ಆಕ್ಷೇಪಣೆಗಳನ್ನು ಸ್ವೀಕರಿಸಿದ ನಂತರ, ಮಾನ್ಯ ನ್ಯಾಯಾಲಯದಲ್ಲಿ ಪ್ರಮಾಣ ಪತ್ರವನ್ನು ಸಲ್ಲಿಸಲು ವಕೀಲರಿಗೆ ರವಾನಿಸಲಾಗುತ್ತಿದೆ. ಆದರೆ, ಮಾನ್ಯ ನ್ಯಾಯಾಲಯದಲ್ಲಿ ಪ್ರಕರಣಗಳು ವಿಚಾರಣೆಗಳಿಗೆ ಬರುತ್ತಿದ್ದಂತೆಯೇ ನಿಗಮದ ವಕೀಲರು ಪ್ರಕರಣಗಳಿಗೆ ಸಂಬಂಧಿಸಿದಂತೆ ನಿಗಮ ಕಾರ್ಯಾಲಯದ ಕಾನೂನು ಶಾಖೆಯಿಂದ ಹಲವು ಸ್ಪಷ್ಟೀಕರಣಗಳನ್ನು ಪದೇ ಪದೇ ಕೋರುತ್ತಿರುತ್ತಾರೆ. ಬೆಂಗಳೂರಿನ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಹೆಚ್ಚು ಪ್ರಕರಣಗಳು ದಾಖಲಾಗುತ್ತಿರುವುದರಿಂದ ಮತ್ತು ಪ್ರತೀ ದಿನ ಕಾನೂನು ಶಾಖೆಯು ಸದರಿ ಪ್ರಕರಣಗಳನ್ನು ಪರಿಶೀಲಿಸಬೇಕಿರುವುದರಿಂದ, ಕಾನೂನು ಶಾಖೆಯ ಸಿಬ್ಬಂದಿಯು ಧಾರವಾಡದ ಮತ್ತು ಕಲಬುರಗಿಯ ನಿಗಮದ ವಕೀಲರಿಗೆ ಸಹಕರಿಸುವುದು ಕಷ್ಟಕರವಾಗಿರುತ್ತದೆ.

ಮೇಲಿನ ಸಂಧರ್ಭಗಳನ್ನು ನಿಗಮವು ಪರಿಗಣಿಸಿ ಈ ಕೆಳಕಂಡಂತೆ ನಿರ್ದೇಶನ/ ಮಾರ್ಗಸೂಚಿಗಳನ್ನು ನೀಡಲಾಗಿದೆ:

1. ಧಾರವಾಡದ ಮತ್ತು ಕಲಬುರಗಿಯ ಕರ್ನಾಟಕ ಮಾನ್ಯ ಉಚ್ಛ ನ್ಯಾಯಾಲಯದ ಪೀಠಗಳಲ್ಲಿ ದಾಖಲಾಗುವ ನಿಗಮದ ವಿರುದ್ಧ ಹೂಡುವ ಪ್ರಕರಣಗಳ ಮತ್ತು ನಿಗಮವು ಹೂಡುವ ಪ್ರಕರಣಗಳ ಸೂಕ್ತ ಮೇಲ್ವಿಚಾರಣೆಗಾಗಿ ಮತ್ತು ಪರಿಣಾಮಕಾರಿ ನಿರ್ವಹಣೆಗಾಗಿ ಕ್ರಮವಾಗಿ

ಉಪ ಲೆಕ್ಕ ನಿಯಂತ್ರಣಾಧಿಕಾರಿ, ಪ್ರಸರಣ(ಕಾಮಗಾರಿ ಮತ್ತು ನಿರ್ವಹಣೆ) ವೃತ್ತ, ಕವಿಪ್ರನಿನಿ, ಹುಬ್ಬಳ್ಳಿ ರವರನ್ನು ಮತ್ತು ಉಪ ಲೆಕ್ಕ ನಿಯಂತ್ರಣಾಧಿಕಾರಿ, ಪ್ರಸರಣ(ಕಾಮಗಾರಿ ಮತ್ತು ನಿರ್ವಹಣೆ) ವೃತ್ತ, ಕವಿಪ್ರನಿನಿ, ಕಲಬುರಗಿ ರವರನ್ನು **"ನೋಡಲ್ ಅಧಿಕಾರಿ"** ಗಳನ್ನಾಗಿ ನೇಮಿಸಿದೆ.

2. ನೋಡಲ್ ಅಧಿಕಾರಿಗಳಾದ ಉಪ ಲೆಕ್ಕ ನಿಯಂತ್ರಣಾಧಿಕಾರಿ, ಪ್ರಸರಣ (ಕಾಮಗಾರಿ ಮತ್ತು ನಿರ್ವಹಣೆ) ವೃತ್ತ, ಕವಿಪ್ರನಿನಿ, ಹುಬ್ಬಳ್ಳಿ ಮತ್ತು ಉಪ ಲೆಕ್ಕ ನಿಯಂತ್ರಣಾಧಿಕಾರಿ, ಪ್ರಸರಣ (ಕಾಮಗಾರಿ ಮತ್ತು ನಿರ್ವಹಣೆ) ವೃತ್ತ, ಕವಿಪ್ರನಿನಿ, ಕಲಬುರಗಿ ರವರುಗಳಿಗೆ ನಿಗಮವು ಈ ಕೆಳಕಂಡ ಜವಾಬ್ದಾರಿಗಳನ್ನು ವಹಿಸಿದೆ:

(ಅ) ತಮ್ಮ ಪ್ರಸರಣ ವಲಯ ವ್ಯಾಪ್ತಿಗೆ ಸಂಬಂಧಿಸಿದಂತೆ ಕರ್ನಾಟಕ ಮಾನ್ಯ ಉಚ್ಛ ನ್ಯಾಯಾಲಯದ ಧಾರವಾಡದ ಮತ್ತು ಕಲಬುರಗಿಯ ಪೀಠಗಳಲ್ಲಿ ದಾಖಲಾಗುವ ಕವಿಪ್ರನಿನಿಯ ಪ್ರಕರಣಗಳ ವಿಷಯಗಳಲ್ಲಿ ನಿಗಮದ ವಕೀಲರನ್ನು (Panel of Advocates) ದೂರವಾಣಿ ಮೂಲಕ/ ಖುದ್ದಾಗಿ ಸಂಪರ್ಕಿಸಿ, ಪ್ರಕರಣಗಳ ವಿಷಯದಲ್ಲಿ ಸಹಕರಿಸುವುದು ಮತ್ತು ಮೇಲ್ವಿಚಾರಣಾ ಕಾರ್ಯಗಳನ್ನು ನಿರ್ವಹಿಸುವುದು.

(ಆ) ಮಾಹಿತಿಗಳನ್ನು ಮತ್ತು ದಾಖಲೆಗಳನ್ನು ಸಂಬಂಧಿಸಿದ ನಿಗಮದ ಕಛೇರಿಗಳಿಂದ ಪಡೆದು ನಿಗಮದ ವಕೀಲರಿಗೆ ಕಳುಹಿಸುವುದು ಮತ್ತು ಮಾನ್ಯ ನ್ಯಾಯಾಲಯದಲ್ಲಿ ಪ್ರಕರಣಗಳು ವಿಚಾರಣೆಗಳಿಗೆ ಬಂದಾಗ ವಿಷಯದಲ್ಲಿ ಸ್ಪಷ್ಟೀಕರಣಗಳ ಅವಶ್ಯಕತೆಯಿದ್ದಲ್ಲಿ, ಕವಿಪ್ರನಿನಿ ನಿಗಮ ಕಾರ್ಯಾಲಯದ ಕಾನೂನು ಶಾಖೆಯೊಂದಿಗೆ ಸಮಾಲೋಚಿಸಿ ಮಾಹಿತಿಗಳನ್ನು ಖುದ್ದಾಗಿ ನಿಗಮದ ವಕೀಲರ ಕಛೇರಿಗಳಿಗೆ ಭೇಟಿ ನೀಡಿ ಒದಗಿಸುವುದು.

(ಇ) ಮಾನ್ಯ ನ್ಯಾಯಾಲಯದಲ್ಲಿ ನಿಗಮದ ವಕೀಲರು ಪ್ರಕರಣಗಳನ್ನು ಪರಿಣಾಮಕಾರಿಯಾಗಿ ನಡೆಸಲು ಅನುಕೂಲವಾಗಲು ಪ್ರಕರಣಗಳ ವಿಚಾರಣೆಗಳ ದಿನದಂದು ಖುದ್ದಾಗಿ ನೋಡಲ್ ಅಧಿಕಾರಿಗಳು ಮಾನ್ಯ ನ್ಯಾಯಾಲಯಕ್ಕೆ ಭೇಟಿ ನೀಡಿ ನಿಗಮದ ವಕೀಲರಿಗೆ ಸಹಕರಿಸುವುದು.

(ಈ) ಒಟ್ಟಾರೆಯಾಗಿ, ನೋಡಲ್ ಅಧಿಕಾರಿಗಳು ಕರ್ನಾಟಕ ಮಾನ್ಯ ಉಚ್ಛ ನ್ಯಾಯಾಲಯದ ಪೀಠಗಳಾದ ಧಾರವಾಡದ ಮತ್ತು ಕಲಬುರಗಿಯ ಹಾಗೂ ಇತರೆ ಜಿಲ್ಲಾವಾರು ನ್ಯಾಯಾಲಯಗಳಲ್ಲಿ ದಾಖಲಾಗುವ ನಿಗಮದ ಪ್ರಕರಣಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಸಂಪೂರ್ಣ ಮೇಲ್ವಿಚಾರಣಾ ಜವಾಬ್ದಾರಿ ಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(ಉ) ಪ್ರಕರಣಗಳ ವಿಷಯಗಳಲ್ಲಿ ಯಾವುದೇ ನಿರ್ಧಾರಗಳನ್ನು ತೆಗೆದುಕೊಳ್ಳುವ ಮೊದಲು, ಕವಿಪ್ರನಿನಿ ನಿಗಮ ಕಾರ್ಯಾಲಯದ ಕಾನೂನು ಶಾಖೆಯೊಂದಿಗೆ ಸಮಾಲೋಚಿಸಿದ ನಂತರವೇ ಅವಶ್ಯಕ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು ಹಾಗೂ ನ್ಯಾಯಾಲಯದ ಪ್ರಕರಣಗಳಲ್ಲಿ ವೈಯಕ್ತಿಕ ಗಮನಹರಿಸಿ ವ್ಯತಿರಿಕ್ತ ಆದೇಶಗಳು ಬಾರದಂತೆ ನೋಡಿಕೊಳ್ಳುವುದು.

(ಊ) ನಿಗಮವು ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಸೂಚಿಸುವ ಇತರೆ ಕಾರ್ಯಗಳನ್ನು ನಿರ್ವಹಿಸತಕ್ಕದ್ದು.

ನಿರ್ದೇಶಕರು(ಆಡಳಿತ ಮತ್ತು ಮಾ.ಸಂ)
ಕವಿಪ್ರನಿನಿ.

ಪ್ರತಿಗಳು ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ:

1. ಮುಖ್ಯ ಇಂಜನಿಯರ್(ವಿ), ಪ್ರಸರಣ ವಲಯ, ಕವಿಪ್ರನಿನಿ, ಬಾಗಲಕೋಟೆ/ಕಲಬುರಗಿ.
2. ಎಲ್ಲಾ ಅಧೀಕ್ಷಕ ಇಂಜನಿಯರ್(ವಿ)ಗಳು/ಲೆಕ್ಕ ನಿಯಂತ್ರಣಾಧಿಕಾರಿಗಳು, ಪ್ರಸರಣ ವಲಯ, ಕವಿಪ್ರನಿನಿ, ಬಾಗಲಕೋಟೆ/ಕಲಬುರಗಿ.
3. ಎಲ್ಲಾ ಕಾರ್ಯನಿರ್ವಾಹಕ ಇಂಜನಿಯರ್(ವಿ)ಗಳು/ಉಪ ಲೆಕ್ಕ ನಿಯಂತ್ರಣಾಧಿಕಾರಿಗಳು, ಪ್ರಸರಣ ವಲಯ, ಕವಿಪ್ರನಿನಿ, ಬಾಗಲಕೋಟೆ/ಕಲಬುರಗಿ.
4. ಸಹಾಯಕ ಪ್ರಧಾನ ವ್ಯವಸ್ಥಾಪಕರು(ಕಾನೂನು), ನಿಗಮ ಕಾರ್ಯಾಲಯ, ಕವಿಪ್ರನಿನಿ, ಬೆಂಗಳೂರು.
5. ಉಪ ಲೆಕ್ಕ ನಿಯಂತ್ರಣಾಧಿಕಾರಿಗಳು, ಪ್ರಸರಣ (ಕಾ ಮತ್ತು ನಿ)ವೃತ್ತ, ಕವಿಪ್ರನಿನಿ, ಹುಬ್ಬಳ್ಳಿ/ಕಲಬುರಗಿ.
6. ನಿಗಮ ಕಾರ್ಯಾಲಯದ ಎಲ್ಲಾ ಅಧಿಕಾರಿಗಳು, ನಿಗಮ ಕಾರ್ಯಾಲಯ, ಕವಿಪ್ರನಿನಿ, ಬೆಂಗಳೂರು.

ಪ್ರತಿಗಳು ಮಾಹಿತಿಗಾಗಿ:

ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ಪ್ರಸರಣ)/(ಹಣಕಾಸು)/(ಆ. ಮತ್ತು ಮಾ.ಸಂ.)/ ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ, ಇವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು.